ಬಯಸುತ್ತೇನೆ. ಅದರ ಜೊತೆಗೆ 1995ನೇ ಇಸವಿಯಿಂದ ಇಲ್ಲಿಯವರೆಗೆ ನಿರ್ಧಾರಗಳು ಹಲವಾರು ಹಂತಗಳಲ್ಲಿ ಆಗಿವೆ ಹಾಗೂ ಬದಲಾವಣೆಗಳನ್ನು ಮಾಡಿಕೊಂಡು ಬಂದಿದ್ದಾರೆ. ಇವತ್ತು ಮಾನ್ಯ ದೇವೇಗೌಡರ ಕಾಲದಿಂದ ಇಲ್ಲಿಯವರೆಗೂ ಯಾರ್ಯಾರು ಮುಖ್ಯಮಂತ್ರಿಗಳಾಗಿದ್ದರು ಯಾರ ಯಾರ ಕಾಲದಲ್ಲಿ ಈ ಒಂದು ನೈಸ್‌ಕಂಪನಿಯು ಬೆಂಗಳೂರು ಮೈಸೂರು ಕಾರಿಡಾರ್ ವಿಷಯದಲ್ಲಿ ಏನು ನಿರ್ಧಾರಗಳು ಆಗಿವೆ ಇದರಲ್ಲಿ ಯಾರು ತಪ್ಪಿತಸ್ಥರು ಎನ್ನುವುದರ ಬಗ್ಗೆ ತೀರ್ಮಾನವನ್ನು ಮಾಡತಕ್ಕಂಥ ವಿಷಯದಲ್ಲಿ ಯಾರೇ ತಪ್ಪಿತಸ್ಥರು ಇರಲಿ ಅವರಿಗೆ ಶಿಕ್ಷೆಯನ್ನು ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಅದನ್ನು ಮಾಡುವುದರ ಮುಖಾಂತರ ಈ ಒಂದು ವಿಷಯದಲ್ಲಿ ಸಾರ್ವಜನಿಕರಿಗೆ ಉಂಟಾಗಿರತಕ್ಕಂಥ ಅನುಮಾನವನ್ನು ಸರಿಪಡಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಎಲ್ಲಾ ನಮ್ಮ ಹಿರಿಯ ಸದಸ್ಯರಿಗೆ ಮತ್ತು ನಮ್ಮ ಸರ್ಕಾರಕ್ಕೆ ಅಧ್ಯಕ್ಷರ ಮುಖಾಂತರ ಮನವಿ ಮಾಡಲಿಕ್ಕೆ ಬಯಸುತ್ತೇನೆ. ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : 'ಬೇವರ್ಸಿ' ಪದದ ಅರ್ಥ ವಿಶ್ಲೇಷಣೆ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಕುಳಿತು ಚರ್ಚೆ ಮಾಡಿ ಆಡಳಿತ ಪಕ್ಷದವರು ಪ್ರತಿಪಕ್ಷದವರು ಎಲ್ಲರೂ ಒಟ್ಟಿಗೆ ಕುಳಿತುಕೊಂಡು ಒಂದು ನಿರ್ಧಾರ ಮಾಡಿ ಊಟದ ನಂತರ ಈ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಬೇಕು ಅಂತ ನಾನು ಮಧ್ಯೆ ಪ್ರವೇಶ ಮಾಡಿದಾಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಸಹ ಅದನ್ನು ಒಬ್ಬ ಸಚಿವರಾಗಿ ಮಾರ್ಗದರ್ಶನ ಮಾಡಿದರು. ಇಂತಹ ಮಹತ್ವವಾದ ವಿಷಯವನ್ನು 5 ಗಂಟೆ ಆದರೂ ಮುಂದೂಡಿಕೊಂಡು ಹೋಗುವಂತಹದ್ದು ಬಹುಶಃ ಈ ರಾಜ್ಯದ ಜನ ಸರ್ಕಾರ ಉದ್ದೇಶ ಪೂರ್ವಕವಾಗಿ ಇದರ ಬಗ್ಗೆ ಚರ್ಚೆ ಮಾಡದೇ ಅವರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದೆ ಎನ್ನುವ ಭಾವನೆಗೆ ಅವಕಾಶವಾಗುತ್ತದೆಂದು ನಾನು ಹೇಳಲಿಕ್ಕೆ ಹೊರಟಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಇದನ್ನು 5 ಗಂಟೆಗೆ ಪ್ರಾರಂಭ ಮಾಡಬೇಕಾಗಿತ್ತು. ತಮಗೆ ಗೊತ್ತಿರುವ ಹಾಗೆ ಮಾನ್ಯ ಹೆಚ್. ಕೆ. ಪಾಟೀಲರು, ಕಾನೂನು ಸಚಿವರು ಬರಬೇಕಾಗಿದೆ. ಅವರು ಆ ಮನೆಯಲ್ಲಿದ್ದಾರೆ ಕರೆಸುತ್ತೇವೆ, ತಾವು ಚರ್ಚೆ ಪ್ರಾರಂಭ ಮಾಡುವುದಾದರೆ ಮಾಡಿ ಸರ್ಕಾರ ಇದೆ. ಏಕೆಂದರೆ ತಾವು ಹೇಳಿದ ಹಾಗೆ ನಾವೆಲ್ಲರೂ ಈ ವಿಚಾರದಲ್ಲಿ ಒಟ್ಟಿಗೆ ಕೆಲಸವನ್ನು ಮಾಡಬೇಕಾಗುತ್ತದೆ, ಇವತ್ತಲ್ಲ ನಾಳೆ ಒಟ್ಟಿಗೆ ಕೆಲಸವನ್ನು ಮಾಡಬೇಕಾಗುತ್ತದೆ. ಇವತ್ತು ಬೆಳಿಗ್ಗೆ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಆಗಿರತಕ್ಕಂಥ ವಿಚಾರ ಏನಿದೆ ಆ ವಿಚಾರದಲ್ಲೂ ಸಹ ನಿಮಗೂ ಸ್ಪಷ್ಟತೆ ಇದೆ ನೀವು ಏನು ಮಾಡಬೇಕು ಅಂತ, ನಮಗೂ ಸ್ಪಷ್ಟತೆ ಇದೆ ನಾವು ಏನು ಮಾಡಬೇಕು ಎನ್ನತಕ್ಕಂಥ ವಿಚಾರದಲ್ಲಿ ಈಗ ಇದನ್ನು ಚರ್ಚೆ ಪ್ರಾರಂಭ ಮಾಡಬೇಕು ಅಂದರೆ ಚರ್ಚೆ ಪ್ರಾರಂಭ ಮಾಡಲಿ ನಮ್ಮದೇನೂ ತಕರಾರು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಜಿ.ಪಿ. ರಾಜರತ್ನಂರವರು ಈ ಬೇವರ್ಸಿ ಎನ್ನುವ ಪದದ ಬಗ್ಗೆ ಅವರ ಪುಸ್ತಕದಲ್ಲಿ ಒಂದು ಹಾಡು ಬರೆದಿದ್ದಾರೆ. ಇದನ್ನು ನಾನು ನಮ್ಮ ಆರೋಗ್ಯ ಸಚಿವರಿಗೆ ತಿಳಿಸಲು ತಮ್ಮ ಲೈಬ್ರರಿಯಿಂದ ತೆಗೆಸಿಕೊಂಡು ಬಂದೆ. ಇದು ಜಿ.ಪಿ.ರಾಜರತ್ನಂ ರವರು ಬರೆದಿರತಕ್ಕಂಥ ಸಾಹಿತ್ಯ. ಬೇವರ್ಸಿ ನನ್ನ ಪುಟ್ಟಂಜಿ ರೂಪನಾಡುತ್ತೀನಿ ಪಾಪ, ನನಗೆ ಆಗಾಗ ಕಾಡಿಸುತ್ತೈತೆ ನನ್ನ ಪುಟ್ಟಂಜಿರೂಪ, ಅಂಸರೆ ಅವರ ಹೆಂಡತಿ ಲತ್ತಾಗ ಈ ರೂಪದಲ್ಲಿ ಬೇವರ್ಸಿ ನನ್ನ ಪುಟ್ಟಂಜಿ ರೂಪನಾಡುತ್ತೀನಿ ಬಾಪ್ಪ ನನ್ನ ಆಗಾಗ ಕಾಡಿಸುತೈತಿ ನನ್ನ ಪುಟ್ಟಂಜಿ ರೂಪ. ಬೇವರ್ಸಿ ಎಂದರೆ ಕೆಟ್ಟ ಪದವಲ್ಲ ಅವರಿಗೆ ಯಾರೂ ಇಲ್ಲದೇ ಇರತಕ್ಕಂಥ ತಬ್ಬಲಿ ಅಂತ ಅಷ್ಟೇ. ಅದನ್ನು ನೀವು ಏನು ಉದ್ರೇಕದಿಂದ ಸುನಾಮಿ ತರಹ ಬಂದುಬಿಟ್ಟಿರಿ. ಏನು ಹುಡುಗಾಟ ಇದು.

ಶ್ರೀ ಎಂ.ಪಿ. ಪ್ರಕಾಶ್ : ಪ್ರೀತಿಯಿಂದ ಹೆಂಡತಿಯನ್ನು ಏ ಬೇವರ್ಸಿ ಎಂದು ಕರೆದಿದ್ದು ಪ್ರೀತಿಯ ಕಾರಣಕ್ಕಾಗಿ, ಅದ್ದರಿಂದ ಅದು ತಪ್ಪಾದಂತೆ ಅಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಹಾಗಾದರೆ, ಬೇವರ್ಸಿ ಎನ್ನುವ ಪದವನ್ನು ಎಲ್ಲರೂ ಉಪಯೋಗಿಸಬಹುದಾ? ದಯಮಾಡಿ ಸದನದಲ್ಲಿ ತೀರ್ಮಾನ ವಾಗಬೇಕು.

ಉಪಾಧ್ಯಕ್ಷರು: ಈ ಸದನದಲ್ಲಿ ಆ ವರ್ಡ್ ಬೇಡ, ಆಗಲೇ ತೆಗೆದು ಹಾಕಿದ್ದೇವೆ, ಮತ್ತೆ ನೀವೇನೊ (ಕಾರ್ಜೋಳ) ಹೇಳುವುದಕ್ಕೆ ಹೋಗುತ್ತೀರಿ

ಅವರೇನೋ ಅರ್ಥ ಮಾಡಿಕೊಳ್ಳುತ್ತಾರೆ, ರಾಮಸ್ವಾಮಿಯವರು ರೈತರಿಗೆ ಸಂಬಂಧಿಸಿದ ವಿಷಯವನ್ನು ಮಾತನಾಡುತ್ತಾರೆ, ನೀವು ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ರೋಷನ್‌ಬೇಗ್‌ರವರಿದ್ದಾರೆ, ಸರ್, ಯತಿಂ ಅಂದರೆ ನೀವು ಹೀಗೆ ಜಗಳವಾಡುತ್ತೀರಾ? ಉರ್ದುವಿನಲ್ಲಿ ಯತಿಂ ಅಂದರೇನು ಸರ್? ಯಾರು ಇಲ್ಲದವನಿಗೆ ದಿಕ್ಕಿಲ್ಲದವನಿಗೆ ಹಾಗೆ ಹೇಳುತ್ತಾರಪ್ಪ, ಆವಾಗ ದಿಕ್ಕಿಲ್ಲವೆನ್ನುವ ಮಾತನ್ನು ಹೇಳಿದರು, ಆಗ ಸರ್ಕಾರ ಆ ಸ್ಥಿತಿಯಲ್ಲೇ ಇದ್ದದ್ದು, ಅವರು ಹೇಳಿದಾಗ ಮಾತ್ರ ಸರ್ಕಾರ ಆ ಸ್ಥಿತಿಯಲ್ಲಿ ಇದ್ದದ್ದು, ಈಗ ಹೇಳುವುದಕ್ಕಾಗುತ್ತದೆಯೇ? ಇಷ್ಟೊಂದು ಸದಸ್ಯರೆಲ್ಲಾ ಕುಳಿತಿದ್ದೀರಿ, ಹೇಳುವುದಕ್ಕಾಗುವುದಿಲ್ಲ, ಆಗ ಹೇಳಿದ್ದು ಸರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ಹೇಳುವುದಕ್ಕಾಗುವುದಿಲ್ಲ.

ಮಾನ್ಯ ಸದಸ್ಯರೊಬ್ಬರು : ಮಾನ್ಯ ಉಪಾಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಗಂಡನೂ ಅಲ್ಲ ಚೆಲುವರಾಯ ಸ್ವಾಮಿ ಹೆಂಡತಿನೂ ಅಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಬೇವರ್ಸಿ ಸರ್ಕಾರ ಎನ್ನುವ ವರ್ಡ್ ಏನು, ಆ ಪದವನ್ನು ಪ್ರೀತಿಯಿಂದ ಉಪಯೋಗಿಸುವುದರಲ್ಲೂ ಅರ್ಥವಿದೆ.

ಡಾ: ಕೆ. ಅನ್ನದಾನಿ : ಯಾರೂದಿಕ್ಕಿಲ್ಲವೆಂದು ಹೇಳಲಿ, ಆದರೆ ಬೇವರ್ಸಿ ಎನ್ನುವ ಪದವನ್ನು ಬಳಸಬಾರದೆಂದು ನಾನು ಹೇಳುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್ : ದಿ: ವಿರೇಂದ್ರಪಾಟೀಲರು ಮುಖ್ಯಮಂತ್ರಿ ಗಳಾಗಿದ್ದಾಗ ಅವರು ಪುಡಾರಿ ಎನ್ನುವ ಪದವನ್ನು ಬಳಸಿದರು. ನಾವು ಏನು ಪುಡಾರಿಎಂದು ಹೇಳುತ್ತಿದ್ದೀರಿ, ಯಾರಿಗೆ ಹೇಳುತ್ತಿದ್ದೀರೆಂದು ನಾವೆಲ್ಲಾ ಗಲಾಟೆಮಾಡಿದೆವು, ಅವರು ಗಂಭೀರವಾಗಿ ಹೇಳಿದರು, ಉತ್ತರ ಕರ್ನಾಟಕದಲ್ಲಿ ಪುಡಾರಿ ಎಂದರೆ ಮುಖಂಡ, ನಿಮ್ಮ ಹಳೆಯ ಮೈಸೂರಿನಲ್ಲಿ ಪುಡಾರಿ ಎಂದರೆ ಬೇರೆ ಅರ್ಥವಿರಬಹುದೆಂದು ಹೇಳಿದರು.

ಡಾ: ಕೆ. ಅನ್ನದಾನಿ : ಬೇವರ್ಸಿ ಎನ್ನುವುದು ಯಾವ ಸೀಮೆಯಪದ ಹೇಳಿ, ದಯವಿಟ್ಟು ಬೇವರ್ಸಿ ಎನ್ನುವುದು ಯಾವ ಕಡೆಯ ಪದ ಹೇಳಿ.

(ಗೊಂದಲ)

ಉಪಾಧ್ಯಕ್ಷರು : ಡಾಕ್ಟರೆ, ನೀವು ಕುಳಿತುಕೊಳ್ಳಿ, ಒಂದೇ ಪದವನ್ನು ಇಟ್ಟುಕೊಂಡು ಒಂದೂವರೆ ಗಂಟೆ ಮಾತನಾಡುತ್ತೀರಲ್ಲ, ಅವರೇನು ಹೇಳಿದರಂತೆ ಅದು ಆಯಿತಂತೆ, ಈಗ ಅವರು ಒಪ್ಪಿಕೊಂಡಿದ್ದಾರಲ್ಲಾ ಹೋಗಲಿ ಕುಳಿತುಕೊಳ್ಳಿ.

ಡಾ: ಕೆ. ಅನ್ನದಾನಿ : ವಾಟಾಳ್ ನಾಗರಾಜ್‌ರವರು ಪದೇ ಪದೇ ಅದೇ ವಿಷಯವನ್ನು ಚರ್ಚೆ ಮಾಡುವುದಕ್ಕೆ ನೀವೇಕೆ ಅವಕಾಶ ಮಾಡಿಕೊಡುತ್ತೀರಿ? ನಾವು ಮಾತನಾಡಿದಾಗ ಮಾತ್ರ ಕುಳಿತುಕೊಳ್ಳಿ ಎನ್ನುತ್ತೀರಿ.

ಉಪಾಧ್ಯಕ್ಷರು: ಈಗ ನೀವು ಮಾತನಾಡಬೇಕಾ, ಅವರಿಗೆ ಮಾತನಾಡುವುದಕ್ಕೆ ಹೇಳಬೇಕಾ?

ಡಾ: ಕೆ. ಅನ್ನದಾನಿ: ಈ ತಾರತಮ್ಯ ಸರಿಯಲ್ಲ.

ಶ್ರೀ ಗೋವಿಂದಪ್ಪ ಎಂ. ಕಾರಜೋಳ : ಇದೇ ನಿದು ಭಾಷೆ, ಅವರಿಗೆ ನಾನು ಮಾತನಾಡಿದ್ದು ಅರ್ಥವಾಗಲಿಲ್ಲ, ಅವರೇನು ಮಾತನಾಡಿದರು ಎನ್ನುವುದನ್ನು ಉಪಾಧ್ಯಕ್ಷರೇ ದಯಮಾಡಿ ತಾವೇ ಹೇಳಿ.

ಉಪಾಧ್ಯಕ್ಷರು : ಅರ್ಥವಾಯಿತು ಕುಳಿತುಕೊಳ್ಳಿ, ನಮ್ಮ ಭಾಷೆಗಳನ್ನು ಉಪಯೋಗಿಸಬೇಕಾದರೆ ನಮ್ಮಲ್ಲಿ ಸಾಕಷ್ಟು ಇದ್ದಾವೆ, ಅವು ಎಲ್ಲರಿಗೂ ಅನ್ವಯಿಸುತ್ತದೆ, ಸದನದಲ್ಲಿರುವ ಒಬ್ಬರಿಗೆ ಅದು ಅನ್ವಯಿಸುವುದಿಲ್ಲ, ಅದು ಆಗಿಹೋಯಿತು, ಅದನ್ನು ಬಿಟ್ಟು ಬಿಡಿ, ಮಾನ್ಯ ಕೆ.ಟಿ. ರಾಮಸ್ವಾಮಿಯವರು ಮಾತನಾಡಿ.

10. ನಿಯಮ 69ರ ಮೇರೆಗೆ ಅಲ್ಪಾವಧಿ ಚರ್ಚೆ

ವಿಷಯ: ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಅಕ್ರಮ ವ್ಯವಹಾರಗಳ ಬಗ್ಗೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು, ಅಕ್ರಮ ವ್ಯವಹಾರಗಳಿಂದ ನಷ್ಟ ಅನುಭವಿಸುತ್ತಿದ್ದಾವೆ. ಇದರಿಂದ ಈ ರಾಜ್ಯದ ರೈತರು ಹಾಗೂ ಕಾರ್ಮಿಕರಿಗೆ, ತುಂಬಾ ತೊಂದರೆಯಾಗುತ್ತಿದೆ, ಆ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಸಹಕಾರಿ ಆಂದೋಲನ ಪ್ರಾರಂಭವಾಗಿ ನೂರು ವರ್ಷವಾಯಿತು. ಆದರೆ ಈ ನೂರು ವರ್ಷದಲ್ಲಿ ಸಹಕಾರಿ ರಂಗದಲ್ಲಿ ನಾವು ಸಾಧನೆ ಮಾಡಿದ್ದಕ್ಕಿಂತಲೂ ಕೂಡ ಅವಸಾನದ ಕಡೆಯೇ ಸಾಗಿದ್ದೇವೆಂದರೆ ತಪ್ಪಲ್ಲವೆಂದು ಭಾವಿಸಿದ್ದೇನೆ. ಈ ಅವಸಾನದ ಕಡೆಗೆ ಹೋಗುವುದಕ್ಕೆ ಬಹು ಮುಖ್ಯವಾದ ಕಾರಣ ದೋಷಪೂರಿತ ಆಡಳಿತ ಮತ್ತು ಅಪ್ರಮಾಣಿಕತೆ. ಈ ದೋಷಪೂರಿತ ಆಡಳಿತ ಮತ್ತು ಅಪ್ರಮಾಣಿಕತೆಯಿಂದಾಗಿ ಇವತ್ತು ಸಹಕಾರಿ ರಂಗದ ಬಹುತೇಕ ಎಲ್ಲಾ 21 ಸಹಕಾರಿ ಸಕ್ಕರೆ ಕಾರ್ಖಾನೆಗಳೂ ಕೂಡ ಮುಚ್ಚುವ ಹಂತಕ್ಕೆ ಈಗಾಗಲೇ ತಲುಪಿದ್ದಾವೆ. ನನಗೆ